## ಮಾರಕಪೂರಕಗಳ 'ವಿಕಾಸ'ವಾದ

ಸಮಾಜಕ್ಕೆ ಯಾವುದು ಪೂರಕ? ಯಾವುದು ಮಾರಕ? ಇಂಥದೊಂದು ಜಿಜ್ಞಾಸೆಯ ಕಥನ 'ಖರಾಬ್ ದುನಿಯಾ' ಚಿತ್ರದ್ದು. ಸಿನಿಮಾದ ಶೀರ್ಷಿಕೆಯಲ್ಲಿ ನಕಾರಾತ್ಮಕ ಅಂಶವಿದ್ದರೂ, ಸಿನಿಮಾ ಶೋಧಿಸಲು ಹೊರಟಿರುವುದು ಸಮಾಜದಲ್ಲಿನ ಒಳಿತು ಕೆಡುಕುಗಳನ್ನು!

'ಖರಾಬ್ ದುನಿಯಾ' ವಿಕಾಸ್ ಮದಕರಿ ನಿರ್ದೇಶನದ ಸಿನಿಮಾ. ನಿರ್ದೇಶನದ ಜೊತೆಗೆ ನಟನೆಯ ಹುಮ್ಮಸ್ಸಿನಲ್ಲೂ ಅವರಿದ್ದಾರೆ. ಈ ಮುನ್ನ ಕೆಲವು ಸಿನಿಮಾಗಳಲ್ಲಿನ ಸಣ್ಣಪುಟ್ಟ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದರೂ, ನಾಯಕನಟನಾಗಿ ಅವರು ನಟಿಸುತ್ತಿರುವುದು ಇದೇ ಮೊದಲು. ಹಾಗಾಗಿ, ನಿರ್ದೇಶನದ ಸವಾಲು ಹಾಗೂ ನಟನೆಯ ಪುಲಕವನ್ನು ವಿಕಾಸ್ ಒಮ್ಮೆಗೇ ಅನುಭವಿಸುತ್ತಿದ್ದಾರೆ.

'ಖರಾಬ್ ದುನಿಯಾ' ಚಿತ್ರದ ಕಥೆ ಮರ್ಡರ್ ಮಿಸ್ಟರಿಗೆ ಸಂಬಂಧಿಸಿದ್ದು. 2014ರಲ್ಲಿ ನಡೆದ ಕೊಲೆಯ ಘಟನೆಯೊಂದನ್ನು ದೃಶ್ಯ ಮಾಧ್ಯಮಕ್ಕೆ ಅಳವಡಿಸಿಕೊಳ್ಳಲಾಗಿದೆ. 'ನಿಜ ಘಟನೆಗಳ ಸುತ್ತ ಒಂದು ಸುತ್ತು' ಎನ್ನುವ ಉಪಶೀರ್ಷಿಕೆಯೇ ಚಿತ್ರಕಥೆಗೆ ಕನ್ನಡಿ ಹಿಡಿಯುವಂತಿದೆ. ನೈಜ ಘಟನೆಯನ್ನು ಸಿನಿಮಾ ಅಗತ್ಯಕ್ಕೆ ತಕ್ಕಂತೆ ನಿರ್ದೇಶಕರು ಬದಲಿಸಿಕೊಂಡಿದ್ದಾರೆ. ಇಡೀ ಸಿನಿಮಾದ ಕಥನ ಬೆಂಗಳೂರಿನ ವಿಲ್ಸನ್ ಗಾರ್ಡನ್ನ ಪರಿಸರದಲ್ಲಿ ಜರುಗಲಿದೆ. ಮೂವತ್ತೈದು ದಿನಗಳ ಶೂಟಿಂಗ್ ಶೆಡ್ಯೂಲ್ ಗೊತ್ತುಪಡಿಸಿಕೊಂಡಿರುವ ಅವರು, ಐದು ಗೀತೆಗಳಿಗೂ ಚಿತ್ರದಲ್ಲಿ ಅವಕಾಶ ಕಲ್ಪಿಸಿಕೊಂಡಿದ್ದಾರೆ.



ಸಂಹಿತಾ ಚಿತ್ರದ ನಾಯಕಿ. ನಿರ್ದೇಶಕರು ಹೇಳಿರುವ ಕಥೆಯನ್ನು ಕೇಳಿ, ತಮ್ಮ ಪಾತ್ರಕ್ಕೆ ಚಿತ್ರದಲ್ಲಿ ಸಾಕಷ್ಟು ಅವಕಾಶವಿದೆ ಎಂದು ಅವರಿಗನ್ನಿಸಿದೆ. ಕಾಲೇಜು ಹುಡುಗಿಯಾಗಿ ಹಾಗೂ ಗೃಹಿಣಿಯಾಗಿ ಅವರು ಚಿತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಇದರ ಜೊತೆಗೆ ಅವರ ಪಾತ್ರಕ್ಕೆ ಮತ್ತೊಂದು ಆಯಾಮವೂ ಇದೆಯಂತೆ. ಒಂದೇ ಪಾತ್ರದಲ್ಲಿ ವಿಭಿನ್ನ ಮನೋಧರ್ಮಗಳನ್ನು ಕಾಣಿಸುವ ಪಾತ್ರದ ನಿರ್ವಹಣೆ ಅವರಿಗೆ ಸವಾಲು ಎನ್ನಿಸಿದೆ. ಹೊನ್ನವಳ್ಳಿ ಕೃಷ್ಣ, ವೈಜನಾಥ ಬಿರಾದಾರ್, ಅವಿನಾಶ್ ಹಾಗೂ ಶೋಭ ರಾಜರಂಥ ಹಿರಿಯ ಕಲಾವಿದರು ತಾರಾಗಣದಲ್ಲಿದ್ದಾರೆ. ವೀನಸ್ ಮೂರ್ತಿ ಛಾಯಾಗ್ರಹಣ ಚಿತ್ರಕ್ಕಿದೆ.



## ಮಳೆ ದಿನಗಳಲ್ಲಿ 'ಧೈರ್ಯಂ'

ತಮ್ಮ ಸಿನಿಮಾದ ಬಗ್ಗೆ ರಂಗುರಂಗಿನ ಮಾತುಗಳನ್ನಾಡಿದರೂ, ಸಿನಿಮಾ ಬಿಡುಗಡೆಯ ಸಂದರ್ಭದಲ್ಲಿ ಚಿತ್ರತಂಡದ ಸದಸ್ಯರು ಕೊಂಚ ಧೈರ್ಯಗೆಡುವುದು ಸಹಜ. ಆದರೆ, ನಾಯಕ ನಟ ಅಜೇಯ್ ರಾವ್ ಅವರ ಅನುಭವವೇ ಬೇರೆ. ಅವರ ನಟನೆಯ ಚಿತ್ರವೊಂದರ ಬಿಡುಗಡೆ ಸನ್ನಿಹಿತವಾಗುತ್ತಿರುವ ಸಂದರ್ಭದಲ್ಲಿ, ಗೆಲುವಿನ ಕುರಿತಂತೆ ಅವರಲ್ಲಿ ಧೈರ್ಯ ಹೆಚ್ಚುತ್ತಿದೆಯಂತೆ! ಹಾಗೆಂದು ಇದನ್ನು ಸುಳ್ಳು ಎನ್ನುವಂತಿಲ್ಲ – ಹೇಳಿಕೇಳಿ, ಸಿನಿಮಾದ ಹೆಸರೇ 'ಧೈರ್ಯಂ'.

ಅಜೇಯ್ ಪಾಲಿಗೆ 'ಧೈರ್ಯಂ' ತುಂಬಾ ವಿಶೇಷವಾದ ಹಾಗೂ ಅಪಾರ ನಿರೀಕ್ಷೆಯ ಸಿನಿಮಾ. ಮತ್ತೂ ಸ್ಪಷ್ಟವಾಗಿ ಹೇಳುವುದಾದರೆ, ಅವರನ್ನು ಹೊಸ ಇಮೇಜಿನಲ್ಲಿ ಕಾಣಿಸುತ್ತಿರುವ ಚಿತ್ರವಿದು. 'ಧೈರ್ಯಂ' ಮೂಲಕ ಅವರು, ನವಿರು ಪ್ರೇಮಕಥೆಗಳ ಅಂಗಳದಿಂದ ಸಾಹಸಪ್ರಧಾನ ಪಾತ್ರದ ನಿರ್ವಹಣೆಯ ಪ್ರಯೋಗಕ್ಕೆ ತಮ್ಮನ್ನು ಒಡ್ಡಿಕೊಂಡಿದ್ದಾರೆ.

ಅದಿತಿ ಚಿತ್ರದ ನಾಯಕಿ. ನಾಯಕಿಯಾಗಿ ಅವರಿಗಿದು ಮೊದಲ ಅನುಭವ. ಚೊಚ್ಚಿಲ ಚಿತ್ರದಲ್ಲೇ ಸೊಗಸಾದ ತಂಡದೊಂದಿಗೆ ಕೆಲಸ ಮಾಡಿದ ಖುಷಿ ಅವರದು. ಎಮಿಲ್ ಸಂಗೀತ ಹಾಗೂ ಶೇಖರ್ ಚಂದ್ರು ಛಾಯಾಗ್ರಹಣ ಚಿತ್ರಕ್ಕಿದೆ.

ಶಿವ ತೇಜಸ್ 'ಧೈರ್ಯಂ' ಸಿನಿಮಾದ ನಿರ್ದೇಶಕರು. 'ಮಳೆ' ಸಿನಿಮಾದ ಮೂಲಕ ನಿರ್ದೇಶಕರಾಗಿ ಗುರ್ತಿಸಿಕೊಂಡಿರುವ ಅವರು, ತಮ್ಮ ಮೊದಲ ಚಿತ್ರದ ಛಾಯೆಯಿಂದ ಸಂಪೂರ್ಣ ಹೊರಬಂದು ಎರಡನೇ ಸಿನಿಮಾ ರೂಪಿಸಿದ್ದಾರಂತೆ. 'ಮೈಂಡ್ ಗೇಮ್ ಸಿನಿಮಾ' ಎಂದು ತಮ್ಮ ಚಿತ್ರವನ್ನು ಬಣ್ಣಿಸುವ ಅವರು, ನಾಯಕ ಮತ್ತು ಖಳನಾಯಕನ ನಡುವಣ ಪೋಟಿ ಪೈಪೋಟಿಯ ದೃಶ್ಯಗಳು ಪ್ರೇಕ್ಷಕರನ್ನು ರಂಜಿಸುವ ವಿಶ್ವಾಸ ಹೊಂದಿದ್ದಾರೆ. ಜೂನ್ ಕೊನೆಯಲ್ಲಿ ಸಿನಿಮಾ ತೆರೆ ಕಾಣುವ ಸಾಧ್ಯತೆಯಿದೆ.

